ಮೂಲ ದಾವಾ ಸಂಖ್ಯೆ. 248/2016 ಪಿ ಡಬ್ಲ್ಯೂ 3

(ದಿನಾಂಕ 13-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಪಿ ಕೆ ವಕೀಲರಿಂದಃ-

ನಾನು ಖರೀದಿ ಮಾಡಿರುವ ಪ್ಲಾಟ್ ನಂ.105/7 ಇರುತ್ತದೆ. ಅದರ ವಿಸ್ತೀರ್ಣ 40 )( 30 ಇರುತ್ತದೆ. ಸದರಿ ಆಸ್ತಿಯ ಪೂರ್ವಕ್ಕೆ ಯಲ್ಲಪ್ಪ ಇವರ ಸ್ವತ್ತು, ಪಃ ಯಾರ ಆಸ್ತಿ ಇದೆ ಅಂತಾ ನನಗೆ ನೆನಪಿಲ್ಲ, ಉಃ ಸರ್ಕಾರ ರಸ್ತೆ ಇರಬೇಕು, ದಃ ಖಾಲಿ ಜಾಗ ಇದೆ. ಸದರಿ ಖಾಲಿ ಜಾಗ ಯಾರದು ಅಂತಾ ನನಗೆ ಗೊತ್ತಿಲ್ಲ. ನಾನು ಸದರಿ ಆಸ್ತಿಯನ್ನು ಭಜಂತ್ರಿ ಹುಲುಗಪ್ಪ ಇವರಿಂದ ಖರೀದಿಸಿರುತ್ತೇನೆ. ಭಜಂತ್ರಿ ಹುಲುಗಪ್ಪ ಇವರಿಗೆ ಸದರಿ ಆಸ್ತಿ ಹೇಗೆ ಬಂತು ಅಂತಾ ನಾನು ವಿಚಾರ ಮಾಡಿಲ್ಲ. ಹುಲುಗಪ್ಪ ಇವರ ಹೆಸರಿಗೆ ಪಟ್ಟಾ ಆಗಲೀ ಮೂಲ ಖರೀದಿ ಪತ್ರವಾಗಲೀ ಯಾವುದೂ ಇರಲಿಲ್ಲವೆಂದರೆ ನನಗೆ ಗೊತ್ತಿಲ್ಲ.

ನಾನು ಹೇಳುವ ಚಕ್ಕುಬಂದಿಯ ಜಾಗವನ್ನು ಸರ್ಕಾರದವರು ಹುಂಡೇಕಾರ್ ಕರಿಬಸಮ್ಮ ಇವರಿಗೆ ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅದು ಪ್ಲಾಟ್ ನಂ.29 ವಿಸ್ತೀರ್ಣ 45 )( 70 ಅಡಿ ಉದ್ದ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ಲಾಟನ್ನು ಹುಂಡೇಕಾರ್ ಕರಿಬಸಮ್ಮ ಇವರಿಂದ ಚಂದ್ರಮ್ಮ ಇವರು ಖರೀದಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ ಅರ್ಧ ಭಾಗವನ್ನು ರೆಡ್ಡಿನಾಯ್ಕ ಇವರಿಗೆ ಮತ್ತು ಇನ್ನರ್ಧ ಭಾಗವನ್ನು ದೇವಿಬಾಯಿ ಇವರಿಗೆ ಚಂದ್ರಮ್ಮ ಇವರು ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ರೆಡ್ಡಿನಾಯ್ಕ ಮತ್ತು ದೇವಿಬಾಯಿ ಇವರು ಸದರಿ ಆಸ್ತಿಗಳ ಕುರಿತು ಸರ್ವೆ ಇಲಾಖೆಯಿಂದ ಅಳತೆ ಮಾಡಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅಲ್ಲಿಂದ ಇಲ್ಲಿಯವರೆಗೂ ತಾವು ಖರೀದಿಸಿದ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದು ತೆರಿಗೆ ಸಹಾ ಅವರೇ ಪಾವತಿಸುತ್ತಾ ಬಂದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾನು ಹೇಳುವ ಹಾಗೆ ನಾನು ಖರೀದಿಸಿದ ಆಸ್ತಿಯ ಪ್ಲಾಟು ಇರುವುದಿಲ್ಲ ಎಂದರೆ ಸರಿಯಲ್ಲ. ರೆಡ್ಡಿನಾಯ್ಕ ಮತ್ತು ದೇವಿಬಾಯಿ ಇವರು ಆಸ್ತಿಯನ್ನು ಖರೀದಿಸಿ ಅವರೇ ಅದರಲ್ಲಿ ಸ್ವಾಧೀನದಲ್ಲಿರುತ್ತಾರೆನ್ನುವ ವಿಚಾರ ಗೊತ್ತಿದ್ದರೂ ಸಹಾ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ